

ಸಂ.197 ರೂ.3.50

# ಕಾಮನಬಿಲ್ಲಿನ ರಾಜಕುಮಾರ

ಕನ್ನಡ ರೂಪಾಂತರ
ಡಾ|| ಕೆ. ಶಿವರಾಮ ಕಾರಂತ

DEPARTMENT OF PUB...

894.814 306
KAR N
ಗ್ರಂಥ ಸ್ವಾಮ್ಯ ವಿಭಾಗ

ಬಂಗಾಲದ ಎರಡು ಜಾನಪದ ಕಥೆಗಳು

META ENTERED

DEPARTMENT ... COPY RIGHT BUREAU ... STATE CENTRAL LIBRARY

ಮಕ್ಕಳಿಗೆ ಕಥೆಯೆಂದರೆ ಪ್ರೀತಿ; ಬೆಳೆದವರಿಗೂ ಅವರ ಬದುಕಿಗೆ ಹೊಂದುವ ಕಥೆಗಳನ್ನು ಕೇಳಲು ಇಷ್ಟ. ಈ ಕಾರಣದಿಂದಾಗಿಯೇ ಅನೇಕ ತಲೆಮಾರು-ಗಳಿಂದಲೂ ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಸಹಸ್ರಾರು ಕಥೆಗಳು ಇಂದಿನ ತನಕವೂ ಹರಿದು ಬಂದಿವೆ.

ಹಾಗೆ ಒಬ್ಬರಿಂದ ಇನ್ನೊಬ್ಬರಿಗೆ ಹರಿದು ಬರುವ ಕಥೆಗಳಲ್ಲಿ ಅವುಗಳ ಬಣ್ಣ, ಬೆಡಗು ಬದಲಿಸುತ್ತಲೇ ಹೋಗುತ್ತದೆ. ತಾನು ಚಿಕ್ಕವಳಿದ್ದಾಗ ತನ್ನ ಅಜ್ಜಿ-ಯಿಂದ ಕೇಳಿದ ಕಥೆಯೊಂದನ್ನು ಒಬ್ಬಳು ಮುಂದೆ ತಾನು ಅಜ್ಜಿ-ಯಾದ ಕಾಲಕ್ಕೆ ತನ್ನ ಮೊಮ್ಮಕ್ಕಳಿಗೆ ಹೇಳುತ್ತಾಳೆ. ಒಂದು ಊರಿಂದ ಇನ್ನೊಂದು ಊರಿಗೆ ಪಯಣಿಸುವ ಒಬ್ಬ ವ್ಯಕ್ತಿ ತಾನು, ದಾರಿಯಲ್ಲಿ ಯಾರಿಂದಲೋ ಕೇಳಿದ ಕಥೆಯನ್ನು ತನ್ನೂರನ್ನು ಸೇರಿದ ಬಳಿಕ ತನ್ನವರಿಗೆ ಹೇಳುತ್ತಾನೆ. ಹಾಗೆ ಹೇಳುವಾಗ ಆ ಸ್ಥಳ, ಸಂದರ್ಭಗಳು, ವಿವರಗಳು ಬದಲಾಗುತ್ತವೆ. ಅಂಥ ಬದಲಾವಣೆ ಕಥೆ ಹೇಳುವವರ ಸಲುವಾಗಿ ಅವಶ್ಯವಾಗುತ್ತದೆ. ಹೀಗೆ ಕಥೆಗಳು ದೇಶದಿಂದ ದೇಶಕ್ಕೆ ಹರಿಯು-ವುದರಿಂದ ಅನೇಕ ದೇಶಗಳ ಕಥೆಗಳಲ್ಲಿ ನಾವು ಕೆಲವು ಸಮಾನ ಗುಣ-ಗಳನ್ನು ಗುರುತಿಸಬಹುದು. ಇಸೋಪನ ನೀತಿಕಥೆಗಳು ವಿಷ್ಣು-ಶರ್ಮನ ಪಂಚತಂತ್ರದ ಕಥೆಗಳನ್ನು ಹೋಲುವುದುಂಟು.

ಈ ಅಮರ ಚಿತ್ರ ಕಥೆ ಬಂಗಾಲದ ಜಾನಪದ ಕಥೆಗಳ ಸಂಗ್ರಹರೂಪ-ವಾಗಿದೆ.

IBH

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009


STATE CENTRAL LIBRARY, BANGALORE.
COPY RIGHT BUREAU

ತಥಗಳು

Published by G.K. Ananthram for IBH Prakashana, Gandhinagar, Bangalore 560 009 and printed by Deepak G. Mirchandani at IBH Printers, Marol Naka Mathuradas Vissanji Road, Andheri (East), Bombay 400 059

Editor : Anant Pai   Script: Swapna Dutta and Subba Rao   Artworks: Dilip Kadam



ಕಾಮನಬಿಲ್ಲಿನ ರಾಜಕುವರ
ರಾಜಕುವರಿಯಾದ ರೂಪಾಂಜಲಿ ಬಲು ಚೆಲುವೆ. ಅವಳ ನಗುವೆಂದರೆ ನದಿಯು ಜುಳು ಜುಳು ನಿನಾದದಂತೆ.
ನಮ್ಮ ಮುದ್ದು ಮಗಳಿಗೆ ತಕ್ಕ ರಾಜಕುಮಾರನನ್ನು ಎಲ್ಲಿಂದ ತರುವುದು ?
ನಮ್ಮ ಲಾವಣಿಕಾರರು ಅಷ್ಟೇ ಚೆಲುವಿನ ರಾಜಕುವರನನ್ನು ಅರಸಿಕೊಂಡು ಬಂದಾರು.
ಆತ ನೂರಾರು ರಾಜ್ಯಗಳಿಗೆ ಹಲವು ಲಾವಣಿಕಾರರನ್ನು ಯೋಗ್ಯ ವರನ ಶೋಧನೆಗಾಗಿ ಕಳುಹಿಸಿದ. ಅವರೆಲ್ಲ ಹಿಂದಿರುಗುತ್ತಲೇ -
ಮಹಾಪ್ರಭು, ನಮಗೆ ಅತ್ಯಂತ ಚೆಲುವರಾಗಿ ಕಂಡ ರಾಜಕುವರರ ಭಾವಚಿತ್ರಗಳನ್ನು ತಂದಿದ್ದೇವೆ. ರಾಜಕುವರಿ ಅವರಲ್ಲೊಬ್ಬ -


ಅವರು ತಂದ ಭಾವಚಿತ್ರಗಳನ್ನು
ಕರೆತಂದರು.
ನಿನ್ನದೇ ಆಯ್ಕೆ. ನೀನು ಇವರಲ್ಲಿ ಯಾರನ್ನು ವರಿಸಲು ಇಚ್ಛಿಸುತ್ತೀ ಎಂದು ಹೇಳು.
ರೂಪಾಂಜಲಿ ಭಾವಚಿತ್ರಗಳನ್ನೆಲ್ಲ ನೋಡಿದಳು.
ಮಗೂ, ನಿನಗೆ ಯಾರು ಒಪ್ಪಿಗೆಯಾದರು ?
ಇವರಲ್ಲಿ ನನಗೆ ತಕ್ಕವರು ಯಾರೂ ಇಲ್ಲ.
ರೂಪಾಂಜಲಿ ಬಾನಿನತ್ತ ಕೈ ಮಾಡಿ-
ನಾನು ಮದುವೆಯಾಗುವ ರಾಜಕುವರ ಆ ಕಾಮನಬಿಲ್ಲಿನಷ್ಟು ಚಂದವಾಗಿರಬೇಕು.



ಮರುದಿನ ಆ ನಗರದಲ್ಲಿ ಒಬ್ಬ ಆಗಂತುಕ ಕಾಣಿಸಿಕೊಂಡ.
ಅವನ ಸಂಗೀತ ಎಷ್ಟು ಮಧುರ !
ಅವನು ಎಲ್ಲಿ-ಯವನೋ?
ಆ ಆಗಂತುಕ ನೆಟ್ಟಗೆ ಅರಮನೆಗೆ ಹೋದ.
ದೊರೆಯೇ, ನಾನು ಕಾಮನಬಿಲ್ಲಿನ ನಾಡಿನಿಂದ ಬಂದೆ. ನಮ್ಮ ರಾಜಕುಮಾರನಿಗಾಗಿ ಯೋಗ್ಯ ವಧುವನ್ನು ಹುಡುಕುತ್ತಿರುವೆ. ನಿಮ್ಮ ಮಗಳು ರೂಪಾಂಜಲಿಯ ಸುದ್ದಿಯನ್ನು ಕೇಳಿ ಮದುವೆಯ ಸೂಚನೆ ಕೊಡಲು ಬಂದೆ.
ದೊರೆ ಆ ಆಗಂತುಕನನ್ನು ಸ್ವಾಗತಿಸಲು ಸಿಂಹಾಸನ ಬಿಟ್ಟು ಬಂದ.
ನಿನಗೆ ಹೃತ್ಪೂರ್ವಕ ಸ್ವಾಗತ. ಇಂದು ನನ್ನ ಮಗಳ ಪಾಲಿಗೆ ಸುದಿನ. ನಿನ್ನ ಸಲಹೆಗೆ ನನ್ನ ಒಪ್ಪಿಗೆ.


ಕೇಳಿ, ಅದಕ್ಕೆ ಮುಂಚೆ ಒಂದು ವಿಷಯ ತಿಳಿಸುತ್ತೇನೆ. ಸ್ವಲ್ಪ ಕಾಲದ ಹಿಂದೆ-
.... ಒಬ್ಬಳು ದುಷ್ಟ ಮಾಟಗಾತಿ ನಮ್ಮ ದೇಶಕ್ಕೆ ಬಂದಿದ್ದಳು...
... ಅವಳು ನಮ್ಮ ರಾಜಕುವರನಿಗೆ ದೀರ್ಘ ನಿದ್ದೆ ಬರುವಂತೆ ಮಾಟ ಮಾಡಿದಳು...
ನಮ್ಮ ರಾಜಕುವರನ ಚೇತನ-ವನ್ನು ಒಂದು ಕೆಂಪು ಬಣ್ಣದ ಗಿಳಿಯಲ್ಲಿ ಊದಿದಳು....
.... ಆ ಗಿಳಿಯನ್ನು ಹಾರಲು ಬಿಟ್ಟಳು.


ಆ ಕೆಂಪು ಗಿಳಿ ಸಿಗುವ ತನಕವೂ ನಮ್ಮ ರಾಜಕುವರ ಎಚ್ಚರಗೊಳ್ಳಲಾರ.
ಒಬ್ಬಳೇ ಮಗಳನ್ನು ತಿರುಗಿ ಎಚ್ಚರಗೊಳ್ಳದ ರಾಜಕುಮಾರನಿಗೆ ಒಪ್ಪಿಸುವುದು ಹೇಗೆ ?
ಈ ಸುದ್ದಿ ರೂಪಾಂಜಲಿಗೆ ತಿಳಿಯಿತು. ಅವಳು -
ನಾನು ಆ ಕಾಮನಬಿಲ್ಲಿನ ರಾಜಕುವರನನ್ನೇ ಮದುವೆಯಾಗುವವಳು. ಅವನ ನಿದ್ರೆಯನ್ನು ಬಿಡಿಸಲು ಆ ಕೆಂಪು ಗಿಳಿಯನ್ನು ಹುಡುಕಲೇಬೇಕು
ಆದರೆ ಅದು ಎಲ್ಲಿ ಹಾರಿ ಹೋಯಿತೆಂದು ನಮಗೆ ತಿಳಿಯದಲ್ಲ ?
ರೂಪಾಂಜಲಿ ತಾಳ್ಮೆಗೆಟ್ಟು ನೆಲವನ್ನು ತುಳಿದಳು.
ಈ ರಾಜ್ಯದಲ್ಲಿರುವ ಪ್ರತಿಯೊಂದು ಪಕ್ಷಿಯನ್ನೂ ಹಿಡಿಯಿರಿ. ಅವುಗಳಲ್ಲಿ ಆ ಕೆಂಪು ಗಿಳಿಯೂ ಇದ್ದೀತು.



ಅರಸನಿಗೆ ಗಾಬರಿಯಾಯಿತು.
ಅದು ಹೇಗೆ ಸಾಧ್ಯ? ಅದು ಅತಿ ಕ್ರೂರ ಕೆಲಸವಾದೀತು.
ಏನಾದರೂ ಸರಿಯೆ, ಅಪ್ಪಾ, ನೀನು ನನ್ನನ್ನು ಪ್ರೀತಿಸುವೆಯಾದರೆ ಅದಕ್ಕೆ ಒಪ್ಪು.
ಒಂದು ವಿಷಯ-ದಲ್ಲಿ ಎಚ್ಚರ! ಒಂದು ಪಕ್ಷಿಯೂ ತಪ್ಪಿಸಿಕೊಳ್ಳ-ಬಾರದು.
ಆಗಲಿ ಮಗು.
ಮರುದಿನ, ನಾಡಿನ ಯಾವತ್ತೂ ಹಕ್ಕಿಗಳನ್ನು ಹಿಡಿದು ತರುವಂತೆ ಆಜ್ಞೆ ಹೊರಟಿತು.
ಹಕ್ಕಿಗಳ ಗೂಡುಗಳೆಲ್ಲ ಬರಿದಾದುವು.


ಹಕ್ಕಿಗಳ ಸಂತಸದ ಚಿಲಿಪಿಲಿ
ಎಲ್ಲೆಡೆಯೂ ಕೇಳಿಸದಾಯಿತು.


ಅವುಗಳಿಗಾಗಿ ಬಲು ದೊಡ್ಡ ಪಂಜರವೊಂದನ್ನು ನಿರ್ಮಿಸಿ, ಲಕ್ಷಾಂತರ ಹಕ್ಕಿಗಳನ್ನು ಹಿಡಿದು ಅದರಲ್ಲಿ ಇರಿಸಿದರು. ಅವು ಭಯ ಭೀತಿಯಿಂದ, ದುಃಖದಿಂದ ಕೂಗತೊಡಗಿದವು.



ರೂಪಾಂಜಲಿಯ ಸಖಿ ನೀಲಾಂಜನೆಗೆ ಅವುಗಳ ಆರ್ತನಾದ ಕೇಳಿಸಿತು.
ಅಯ್ಯೋ, ಪಾಪದ ಹಕ್ಕಿಗಳೇ! ನಾನು ರಾಜಕುವರಿಯೊಡನೆ ನಿಮ್ಮ ಬಿಡುಗಡೆಗಾಗಿ ಪ್ರಾರ್ಥಿಸುತ್ತೇನೆ. ಆಕೆ ನಿಮ್ಮನ್ನು ಬಿಟ್ಟುಬಿಡುತ್ತಾಳೆ.



ದಯಾಳು ರೂಪಾಂಜಲಿ, ಆ ಬಡ ಹಕ್ಕಿಗಳನ್ನು ಬಿಡು. ಅವುಗಳ ಗೋಳು ನಿನಗೆ ತಿಳಿಯುವುದಿಲ್ಲವೇ?
ರೂಪಾಂಜಲಿಗೆ ವಿಪರೀತ ಕೋಪ ಬಂತು.
ನಿನಗೆ ನನ್ನನ್ನು ಪ್ರಶ್ನಿಸುವಷ್ಟು ಧೈರ್ಯ ಬಂತೇ ?
ರಾಜಕುಮಾರಿಯಲ್ಲಾದ ಬದಲಾವಣೆಯನ್ನು ಕಂಡ ನೀಲಾಂಜನೆಗೆ ದಂಗು ಬಡಿಯಿತು.
ನಾನು ಮೆಚ್ಚಿ ಗೌರವಿಸಿದ ರಾಜಕುಮಾರಿ ಇವಳಲ್ಲ. ಯಾರ ನಗುವಿನಲ್ಲಿ ಕಾಮನ ಬಿಲ್ಲಿನ ಬಣ್ಣ ಮಿನುಗುತ್ತಿತ್ತೋ ಆ ರೂಪಾಂಜಲಿ ಇವಳಲ್ಲ.
ನೀಲಾಂಜನೆ ಇನ್ನೊಮ್ಮೆ
ಮುದ್ದಿನ ರಾಜಕುಮಾರಿ, ಈ ಬಡ ಹಕ್ಕಿಗಳನ್ನು ಗೋಳಾಡಿಸಿ ನಿನಗೆ ಎಂಥ ಸಂತೋಷ ಸಿಕ್ಕೀತು ? ಅವುಗಳನ್ನು ಬಿಟ್ಟುಬಿಡು.


ದು, ದಯಾಮಯಿ, ನಿನಗೆ ಆ ಹಕ್ಕಿಗಳ ಮೇಲೆ ಬಹಳ ಪ್ರೀತಿ! ಅಲ್ಲವೇ?
ಹೌದು ರಾಜಕುವರಿ. ಅವುಗಳ ಬಗ್ಗೆ ನನಗೆ ತುಂಬ ಮರುಕ.
ರೂಪಾಂಜಲಿ ಕಾವಲಿನವರನ್ನು ನೋಡಿ-
ಇವಳನ್ನು ಆ ಪಂಜರದಲ್ಲಿ ನೂಕಿ. ತನ್ನ ಪ್ರೀತಿಯ ಹಕ್ಕಿಗಳ ಜತೆಗೇ ಅವಳು ಇರಲಿ.
ನೀಲಾಂಜನೆಯನ್ನು ಕರೆದೊಯ್ಯುತ್ತಲೇ-
ಅವರು ಹಿಡಿದ ಹಕ್ಕಿಗಳಲ್ಲಿ ಆ ಕೆಂಪು ಗಿಳಿ ಇದೆಯೇ ಎಂದು ನೋಡಬೇಕು.
ಕಾವಲಿನವರು ನೀಲಾಂಜನೆಯನ್ನು ಪಂಜರದೊಳಕ್ಕೆ ಸೇರಿಸಿದರು. ಆಕೆಗೆ ಅತ್ತೂಅತ್ತೂ ಸಾಕಾಗಿ ನಿದ್ದೆ ಬಂತು.

'ನೀಲಾಂಜನೆ,


ನೀಲಾಂಜನೆ ಕಣ್ಣು ತೆರೆದಾಗ ಒಂದು ಕೆಂಪು ಗಿಳಿ ಅವಳನ್ನು ಮಾತಾಡಿಸುತ್ತಿತ್ತು.
ನನ್ನನ್ನು ಬಿಡುಗಡೆ ಮಾಡು ನೀಲಾಂಜನೆ. ಈ ಪಂಜರದ ಸರಳುಗಳು ನನ್ನ ರೆಕ್ಕೆಗಳನ್ನು ಗಾಯಗೊಳಿ- ಸಿವೆ. ಮನುಷ್ಯರಾದ ನೀವು ಎಷ್ಟೊಂದು ಕ್ರೂರಿಗಳು!
ನೀಲಾಂಜನೆ ಮೃದುವಾಗಿ ಆ ಗಿಳಿಯನ್ನು ಕೈಯಲ್ಲಿ ಎತ್ತಿಕೊಂಡಳು.
ಬಡಪಾಯಿ ಗಿಳಿಯೇ, ನಿನಗೆಷ್ಟು ನೋವಾಯಿತೋ ?


ಬಲೆಯ ಕಿಟಕಿಯನ್ನು ತೆರೆದು ನಿನ್ನನ್ನು ಹೊರಕ್ಕೆ ಬಿಡುತ್ತೇನೆ. ನನಗೇನಾದರೂ ಚಿಂತೆಯಿಲ್ಲ.
ಅದೇ ಹೊತ್ತಿಗೆ ನೀಲಾಂಜನೆ ಪಂಜರದ ಬಳಿಗೆ ಹೊರಟಿದ್ದಳು.
ಆ ಕೆಂಪು ಗಿಳಿಯನ್ನು ಹಿಡಿದಿರಬಹುದು.
ಅದೇ ಕೆಂಪು ಗಿಳಿ ! ನೀಲಾಂಜನೆಗೆ ಅದು ಸಿಕ್ಕಿದೆ !



ಅಷ್ಟರಲ್ಲಿ ನೀಲಾಂಜನೆ ಅದನ್ನು ಹೊರಕ್ಕೆ ಬಿಟ್ಟಿದ್ದಳು.
ನೀಲಾಂಜನೆ ! ನೀನೇನು ಮಾಡಿದೆ ?
ಓ ನನ್ನ ಕೆಂಪು ಗಿಳಿಯೆ !
ನೀನು ಪರಮ ದುಷ್ಟೆ. ನನ್ನ ಗಿಳಿಯನ್ನು ಹೊರಗೆ ಬಿಟ್ಟೆ. ಇದಕ್ಕಾಗಿ ಪ್ರಾಣದಂಡನೆ ನಿನಗೆ !


ಅದರ ನೋವನ್ನು ಕಂಡು ಹಾಗೆ ಮಾಡಿದೆ. ನಾನದನ್ನು ಬಿಡದಿದ್ದರೆ ಅದು ಸಾಯುತ್ತಿತ್ತು.
ನೀಲಾಂಜನೆಯ ಕಣ್ಣೀರಾಗಲಿ ವಿನಂತಿಯಾಗಲಿ ರೂಪಾಂಜಲಿಯ ಮನ ಕರಗಿಸಲಿಲ್ಲ.
ಆ ಗಿಳಿಯನ್ನು ಬಿಟ್ಟ ತಪ್ಪಿಗೆ ನೀನು ಸಾಯಲೇ-ಬೇಕು.
ನೀಲಾಂಜನೆಯನ್ನು ಒಂದು ಬೆಟ್ಟದ ತುದಿಗೆ ಕರೆದೊಯ್ದರು.
ದ ಕೆಳಕ್ಕಿರುವ ಒಂದು
ಅವಳನ್ನು
ರಲ್ಲಿದ್ದರು.
ಕಾವಲಿನವ ದರು,
ಅವಳು ಕೆಳಕ್ಕೆ ಬೀಳುತ್ತಿದ್ದಾಗ ಎರಡು ಬಲಿಷ್ಠ ಬಾಹುಗಳು ಅವಳನ್ನು ರಕ್ಷಿಸಿದುವು.


ಮರುಕ್ಷಣ ನೀಲಾಂಜನೆ ತಿರುಗಿ ಅದೇ ಮೇಲೆದ್ದಾಳೆ! ಅವಳ ಬಳಿಯಲ್ಲಿ 'ಚೆಲುವ ರಾಜಕುಮಾರ
ದ್ದನೆ!
ಲಾಂಜನೆ, ನಾನೇ ಕಾಮನಬಿಲ್ಲಿನ ಕುವರ.
ಕಾಮನಬಿಲ್ಲಿನ ರಾಜಕುವರನೇ! ಹಾಗಿದರೆ ನಮ್ಮ ಅರಸುಮಗಳಿಗೆ ಸಂತೋಷವಾದೀತು. ಅವಳ ಬಯಕೆಯ ರಾಜಕುವರ ಬಂದಂತಾಯಿತು.
ರೂಪಾಂಜಲಿ ಮುಂದಕ್ಕೆ ಬಂದಳು.
ರಾಜಕುಮಾರ, ನಾನು ನಿನಗಾಗಿ ಕಾದಿದ್ದೆ.
ಈ ನಿನ್ನ ಸ್ವಾರ್ಥಕ್ಕಾಗಿ ಆ ಮುಗ್ಧ ಹಕ್ಕಿಗಳನ್ನು ಹಿಂಸಿಸುತ್ತಾ ?!

ಆಗ ರಾಜಕುವರ ಕೈಯ್ಯಲ್ಲೊಂದು ಮಾಲೆ ಹಿಡಿದುಕೊಂಡು ಮುಂದಕ್ಕೆ ಬಂದ.







ಆ ರಾಜಕುವರ ನೀಲಾಂಜನೆಯನ್ನು ಹೊನ್ನಿನ ರಥದಲ್ಲಿ ಕುಳ್ಳಿರಿಸಿಕೊಂಡು ಕಾಮನಬಿಲ್ಲಿನ ರಾಜ್ಯಕ್ಕೆ [illegible]. ದುಃಖಿಯಾದ ರೂಪಾಂಜಲಿ ಹಿಂದೆಯೇ ಉಳಿದಳು.




ನಂಬಿಗೆಯ ಕುರುಬ
ಒಂದಾನೊಂದು ಕಾಲದಲ್ಲಿ ಒಬ್ಬ ರಾಜಕುಮಾರನಿದ್ದ. ಅವನ ಆಪ್ತ ಮಿತ್ರನೆಂದರೆ ಒಬ್ಬ ಕುರುಬ.
ಅವರಿಬ್ಬರೂ ಜತೆಗೂಡಿ ಆಡುತ್ತ ಅಲೆಯುತ್ತ ಸಮಯ ಕಳೆಯುತ್ತಿದ್ದರು.
ನೀನು ದೊಡ್ಡವನಾಗಿ ಅರಸಾದಾಗ ನಿನ್ನವರು ಆ ಹಕ್ಕಿಗಳನ್ನು ಬೇಟೆಯಾಡಿ ಕೊಲ್ಲಬಾರದು. ಏನು ?
ಖಂಡಿತ ಇಲ್ಲ.
ನನ್ನನ್ನು ಮರೆಯುವು- ದಿಲ್ಲವಲ್ಲ ?
ಹೇಗೆ ಮರೆತೇನು? ನೀನು ನನ್ನ ಆಪ್ತ ಮಿತ್ರ. ನಿನ್ನನ್ನು ನನ್ನ ಮಂತ್ರಿಯನ್ನಾಗಿ ಮಾಡಿಕೊಳ್ಳು- ತ್ತೇನೆ.


ಒಂದು ದಿನ -
ಗೆಳೆಯಾ, ನಾನಿನ್ನು ನನ್ನ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಹೋಗಬೇಕು.
ಆ ಗೆಳೆಯರು ಒಬ್ಬರನ್ನೊಬ್ಬರು ಬೀಳ್ಕೊಟ್ಟರು.
ಗೆಳೆಯ, ಬೇಗ ಹಿಂದಿರುಗಿ ಬಾ. ಈ ಹಳ್ಳಿ, ಈ ಬೆಟ್ಟ, ಈ ಹಕ್ಕಿಗಳು ನಾವೂ ನಿನಗಾಗಿ ಕಾದಿರುತ್ತೇವೆ.
ಬಹಳ ವರ್ಷಗಳು ಸರಿದರೂ ಆ ಕುರುಬ ಇನ್ನೊಬ್ಬರ ಸ್ನೇಹ ಮಾಡಿಕೊಳ್ಳಲಿಲ್ಲ. ತನ್ನ ರಾಜಕುಮಾರ ಮಿತ್ರ ಬರುವ ತನಕವೂ ಅವನಿಗಾಗಿ ಕಾದ.
ಒಂದು ದಿನ ಆ ಕುರುಬ ತನ್ನ ಮಂದೆಯನ್ನು ಅಟ್ಟಿಕೊಂಡು ಹಿಂದಿರುಗುತ್ತಿದ್ದಾಗ-
ನಿನ್ನ ಮಿತ್ರ ಊರಿಗೆ ಹಿಂದಿರು-ಗಿದ್ದು ನಿನಗೆ ಗೊತ್ತೇ ಇಲ್ಲವೆ? ಅವನಿಗೆ ರಾಜಕುಮಾರಿ ಕನಕಮಾಲೆಯೊಡನೆ ನಾಳೆ ಮದುವೆಯಂತೆ.
ನನ್ನ ರಾಜ-ಕುಮಾರ ಹಿಂದಕ್ಕೆ ಬಂದನೇ? ಹಾಗಾದರೆ ನನ್ನನ್ನು ನೋಡಲು ಬಂದೇ ಬರುತ್ತಾನೆ.


ತಿಂಗಳುಗಳು ಸರಿದರೂ ರಾಜಕುಮಾರ ಬರಲೇ ಇಲ್ಲ.
ರಾಜಕುಮಾರನಿಗೆ ಬಿಡುವಿಲ್ಲವೋ ಏನೋ! ನಾನೇ ಹೋಗಿ ಅವನನ್ನು ಭೇಟಿಯಾಗುತ್ತೇನೆ.
ಆ ಕುರುಬ ತನ್ನ ಸ್ನೇಹಿತನಿಗೆ ಕೊಡಲು ಹೂಗಳನ್ನು ಬಿಡಿಸುತ್ತಿದ್ದಾಗ-
..ಅತ್ತ ರಾಜಕುಮಾರನಿಗೆ ಅರಮನೆಯಲ್ಲಿ ಪಟ್ಟಾಭಿಷೇಕ ನಡೆಯುತ್ತಿತ್ತು.
ಕುರುಬ ಅರಮನೆಯ ಬಳಿಗೆ ಹೋದಾಗ ಹೊಸ ದೊರೆಯನ್ನು ಕಾಣಲು ಅನೇಕರು ಹೊರಗೆ ಕಾದು ನಿಂತಿದ್ದರು.
ನನ್ನ ಗೆಳೆಯ ಈಗ ಹೊರಗೆ ಬರುತ್ತಾನೆ.


ಸ್ವಲ್ಪ ಹೊತ್ತಿನ ಬಳಿಕ ಅರಸ ಹೊರ ಬಂದ. ಕುರುಬ ಅವನ ಭೇಟಿಗಾಗಿ ಮುಂದಕ್ಕೆ ಬಂದು-
ಗೆಳೆಯಾ!
ಅವನೇ ಕುರುಬ! ಬಾಲ್ಯದ ಗೆಳೆತನದ ಲಾಭ ಪಡೆಯಲು ಬಂದಂತಿದೆ. ಅಂಥವರಿಗೆ ಸಲಿಗೆ ಕೊಡಬಾರದು.
ದೊರೆ ಆ ಕುರುಬನ ಕಡೆಗೆ ನೋಡದೆಯೇ ಮಗ್ಗುಲಿಂದಲೇ ಸರಿದುಹೋದ.
ಮಿತ್ರಾ, ನನ್ನ ಗುರುತು ನಿನಗೆ ಸಿಗಲಿಲ್ಲವೇ?
ಅಲ್ಲಿದ್ದ ಕಾವಲಿನವರು ಅವನನ್ನು ತರುಬಿ ಹಿಡಿದರು.
ಸುಮ್ಮನಿರು. ದೊರೆಗಳನ್ನು ಕಾಡಬೇಡ.
ಆ ಕುರುಬ ಕಣ್ಣೀರು ಸುರಿಸುತ್ತ ಸದ್ದಿಲ್ಲದೆ ಹೊರಟುಹೋದ.
ನನ್ನ ಗೆಳೆಯ ನನ್ನನ್ನು ಮರೆತೇಬಿಟ್ಟ!


ಆ ರಾತ್ರಿ ದೊರೆಗೆ ನಿದ್ದೆಯೇ ... ಅವನ ಆತ್ಮ ಸಾಕ್ಷಿ ...
ಅವನನ್ನು ನಾನು ನಿರ್ಲಕ್ಷಿಸಿದ್ದು ತಪ್ಪಾಯಿತು. ಅವನೊಡನೆ ಒರಟಾಗಿ ನಡೆಯದಂತೆ ಕಾವಲಿನವರಿಗೆ ನಾನು ಹೇಳಬೇಕಾಗಿತ್ತು.
ಆದರೆ ಮರುಕ್ಷಣದಲ್ಲಿ ತನ್ನ ವರ್ತನೆಯನ್ನು ಸಮರ್ಥಿಸಿಕೊಂಡು ಸಮಾಧಾನ ತಾಳಿದ.
ಅವನು ಒಳ್ಳೆಯ ಮಿತ್ರನಾಗಿದ್ದರೆ ಅವನಿಗೆ ನನ್ನ ಬವಣೆಯೂ ತಿಳಿಯಬೇಕು. ಒಬ್ಬ ಕುರುಬ ಅರಸನನ್ನು 'ಗೆಳೆಯ' ಎಂದು ಬಹಿರಂಗದಲ್ಲಿ ಕರೆಯುವುದೇ?
ಆದರೆ ದೊರೆ ಬೆಳಿಗ್ಗೆ ಎದ್ದು ನೋಡುವಾಗ ಅವನ ಮೈತುಂಬ ಸಾವಿರ ಸಾವಿರ ಸೂಜಿಗಳು ಚುಚ್ಚಿಕೊಂಡಿದ್ದವು.
ಹಾ...! ಕನಕಮಾಲಾ....
ಪ್ರಭೂ!
ಕನಕಮಾಲಾ, ಸಂಕಟ ಪಡು- ತ್ತಿದ್ದೇನೆ. ನನಗೆ ಸಹಾಯ ಮಾಡು!



Kan. ACK 197



ನಾನು ಈ ಎಲ್ಲ ಸೂಜಿಗಳನ್ನು ಕಿತ್ತು ತೆಗೆಯುತ್ತೇನೆ.
ಆದರೆ ಅದು ಮುಗಿಯದ ಕೆಲಸವೆಂದು
ಒಂದು ಸೂಜಿ-ಯನ್ನು ಕಿತ್ತ ಜಾಗದಲ್ಲಿ ಎರಡು ಸೂಜಿಗಳು ಕಾಣಿಸಿ-ಕೊಳ್ಳುತ್ತವೆ!
ದೊರೆಯ ಈ ಸಂಕಟದ ಸುದ್ದಿ ಬಲು ಬೇಗ ರಾಜ್ಯದ ಎಲ್ಲೆಡೆಗೂ ಹಬ್ಬಿತು.
ದೊರೆಯ ಮೈಯೆಲ್ಲಾ ಸೂಜಿಯಂತೆ!
ನೆರವಾಗ-ಬಹುದು?
ಅರಮನೆಗೆ ನೂರಾರು ಜನರು ಬಂದು ಆ ಸೂಜಿಗಳನ್ನು ಕೀಳಲು ಪ್ರಯತ್ನಿಸಿದರು
ಅದು ಅಸಾಧ್ಯದ ಕೆಲಸವಾಯಿತು. ಆದರೆ ಕನಕಮಾಲೆ ಆಸೆಯನ್ನು ಬಿಡಲಿಲ್ಲ.
ಕನಕಮಾಲ, ನಾನೇನು ಮಾಡಲಿ? ಕಣ್ಣನ್ನೂ ತೆರೆಯಲಾರೆ!
ಪ್ರಭು, ಧೈರ್ಯ ತಂದುಕೊಳ್ಳಿ. ನಾನು ಅವನ್ನು ಕೀಳುತ್ತಲೇ ಇರುತ್ತೇನೆ.



ನಿನ್ನ ಕೈಯೆಲ್ಲ ರಕ್ತದಿಂದ ತೊಯ್ದಿರಬೇಕು. ಸ್ವಲ್ಪ ವಿರಮಿಸು.
ಪ್ರಭು, ನಾನು ನಿಮ್ಮನ್ನು ಬಿಟ್ಟು ದೂರ- ವಿರಲಾರೆ.
ದೊರೆ ಮತ್ತೂ ಅದನ್ನೇ ಹೇಳಿದ -
ಕನಕಮಾಲ, ನದಿಯಲ್ಲಿ ಮಿಂದು ಬಾ. ನಿನ್ನ ದಣಿವು ತೀರಲಿ.
ಕನಕಮಾಲೆ ನದಿಗೆ ಹೋದಾಗ ಒಬ್ಬಳು ತರುಣಿ ಅವಳ ಬಳಿಗೆ ಬಂದಳು.
ನನಗೆ ಯಾರೂ ಇಲ್ಲ. ನಾನು ನಿಮ್ಮ ದಾಸಿಯಾಗಿ ನಿಮ್ಮ ಸೇವೆ ಮಾಡಿ- ಕೊಂಡಿರುತ್ತೇನೆ.
ದೊರೆಯ ಮೈಗೆ ಅಂಟಿದ ಸೂಜಿಗಳನ್ನು ಕೀಳಲು ನನಗೆ ನೆರವಾಗು- ತ್ತೀಯಾ?
ಆಗುತ್ತೇನೆ.
ಹಾಗಿದ್ದರೆ ನಾನು ಮಿಂದಾದ ಬಳಿಕ ನನ್ನ ಜತೆಗೆ ಬಾ.


ಕನಕಮಾಲೆ ನದಿಯಲ್ಲಿಳಿಯುತ್ತಲೇ ಯಾರದೋ ದಿಟ್ಟ ಸ್ವರ ಕೇಳಿಸಿತು.
ಏಯ್! ನನ್ನ ಎಲ್ಲ ಚಾಕರಿ ಮಾಡುವುದಕ್ಕಾಗಿ ಥಟ್ಟನೆ ಹೊರಡು!
ಕನಕಮಾಲೆ ಅಚ್ಚರಿಯಿಂದ ನೋಡಿದಳು.
ಏನು ನಿನ್ನ ಧೈರ್ಯ! ನನ್ನ ವಸ್ತ್ರಾಭರಣಗಳನ್ನು ಅಲ್ಲೇ ಇರಿಸು!
ಆ ಹುಡುಗಿ ಸುಮ್ಮನೆ ನಕ್ಕಳು.
ನೋಡು, ಈಗ ನಾನೇ ರಾಣಿ. ಉಪಾಯವಾಗಿ ನಿನ್ನನ್ನು ಸೋಲಿಸಿದೆ. ನಾನು ರಾಣಿಯಲ್ಲವೆಂದು ಯಾರೂ ಹೇಳರು.
ಕನಕಮಾಲೆ ಮದುವಣಗಿತ್ತಿಯಾಗಿದ್ದಾಗ ಅವಕುಂಠನವನ್ನು ಧರಿಸುತ್ತಿದ್ದಳು. ಅವಳ ಗುರುತಿದ್ದವರು ಕೇವಲ ಮೂವರು. ಉಳಿದವರಿಗೆ ಈ ಠಕ್ಕು ತಿಳಿಯುವಂತಿರಲಿಲ್ಲ.
ವೃದ್ಧ ರಾಜ ರಾಣಿಯರು ಇಲ್ಲಿಲ್ಲ, ಯಾತ್ರೆಗೆ ಹೋಗಿದ್ದಾರೆ. ನನ್ನ ಗಂಡನಿಗೆ ಕಣ್ಣೇ ತೆರೆಯಲು ಬಾರದು ಇವಳ ಠಕ್ಕು ಯಾರಿಂದ ಬಯಲಾದೀತು?
ಏನು ಮಾಡಲಿ? ಅವಳ ದಾಸಿಯಾಗಿ ಅರಮನೆ ಸೇರುತ್ತೇನೆ. ನನ್ನ ಗಂಡನಿಗೆ ನೆರವಾಗಲು ಅವರ ಹತ್ತಿರವೇ ಇರುತ್ತೇನೆ.
ಏಕೆ ತಡ ಮಾಡುತ್ತೀ? ಸ್ನಾನ ಮುಗಿಸಿ ಬೇಗನೆ ಹೊರಟು ಬಾ.


ಅರಮನೆ ಸೇರುತ್ತಲೇ ಆ ವಂಚಕಿ ಅರಸನ ಕೋಣೆಗೆ ಬೀಗ ಹಾಕಿದಳು.
ನೀನು ಒಳಗೆ ಹೋಗಕೂಡದು!
ನನ್ನ ಒಡೆಯನ ಸೇವೆ ಮಾಡಲು ಅವಕಾಶ ಕೊಡು.
ಆ ಸೂಜಿಗಳನ್ನು ಕೀಳುವುದಕ್ಕೇನು? ಹಾಗೆ ನೀನು ಮಾಡಿದರೆ ನನಗೆ ಪ್ರಯೋಜನವಾಗದು.
ಆ ವಂಚಕಿ ಕನಕಮಾಲೆಗೆ ದಿನವೆಲ್ಲ ವಿಪರೀತ ಕೆಲಸ ಕೊಟ್ಟು ಅವಳನ್ನು ದುಡಿಸಿದಳು.
ದೇವರೇ, ನನ್ನ ಗಂಡನನ್ನು ಕಾಪಾಡು!
ಆ ಸಂಜೆ ಕನಕಮಾಲೆ ನದಿಯ ಬಳಿಗೆ ಹೋಗಿ ಅಲ್ಲಿ ಕುಳಿತು ಎದೆ ಬಿರಿಯುವಂತೆ ಅತ್ತಳು. ಅಷ್ಟರಲ್ಲಿ ಒಂದು ದನಿ ಕೇಳಿಸಿತು.
ನೂರು ಸೂಜಿಗಳಿದ್ದರೆ ನಾ ಕಿರೀಟ ಕೊಂಡೇನು... ಸಾವಿರ ಸೂಜಿಗಳಿದ್ದರೆ ನಾ ಪಟ್ಟಣ ಕೊಂಡೇನು....


ಕನಕಮಾಲೆಯ ಕಿವಿ ಚುರುಕಾಯಿತು.
ಅರೆ, ಸೂಜಿಯ ಬಗೆಗೆ ಹಾಡು ಅದರ ಹೆಸರು ಕೇಳಿದರೇ ಭಯವಾಗುತ್ತದೆ.
ಒಂದು ಲಕ್ಷ ಸೂಜಿಗಳಿರಲು ನಾ ಹಾಡಿ ನಲಿದೇನು.... ಕೋಟಿ ಸೂಜಿಗಳಿದ್ದರೆ ನಾನು....
ಕನಕಮಾಲೆ ಅದನ್ನು ಹಾಡುತ್ತಿರುವವನು ಯಾರೆಂದು ಅತ್ತಿತ್ತ ನೋಡಿದಳು.
...ರಾಜ್ಯದ ದೊರೆ ಆದೇನು....
ಓ! ಅತ್ತ
ನಿನಗೆ ನಿಜಕ್ಕೂ ಕೋಟಿ ಸೂಜಿಗಳು ಬೇಕೇನು? ನೀನೇ ಅವನ್ನು ಕೇಳುವೆಯಾದರೆ ನಾನು ಅವನ್ನು ತೋರಿಸಿಕೊಡುತ್ತೇನೆ. ಬಾ ನನ್ನೊಡನೆ.


ಕನಕಮಾಲೆಯ ಜತೆಗೆ ಆ ಗಾಯಕ ಅರಮನೆಗೆ ಹೊರಟ.
ನೀನು ಕಿಟಕಿಯಿಂದ ಆ ಕೋಣೆಯನ್ನು ಹೊಗುತ್ತೀಯಾ ? ದೊರೆಯನ್ನು ಅಲ್ಲಿ ಇರಿಸಿದ್ದಾರೆ. ಅವರ ಮೈ ತುಂಬ ಸೂಜಿಗಳು ನಾಟಿವೆ.
ಆ ಗಾಯಕ ಹತ್ತಿರದ ಒಂದು ಮರವನ್ನೇರಿ....
.... ದೊರೆಯ ಕೋಣೆಯನ್ನು ಹೊಕ್ಕ..
ಕೋಣೆಯನ್ನು ಸೇರಿದವನೇ ತನ್ನ ಕಿಸೆಯಿಂದ ಒಂದು ದಾರವನ್ನು ತೆಗೆದು ವಿಶೇಷ ಮಂತ್ರ ಪಠಿಸಿದ.
ದುಷ್ಟ ಸೂಜಿಗಳೇ ! ದೂರ ಸರಿಯಿರಿ.


ಬಾ ದಾರವೇ ಬಾ, ಪ್ರತಿಯೊಂದು ಸೂಜಿಯನ್ನೂ ಥಟ್ಟನೆ ಜಗ್ಗಿ ಎಳೆ.
ಮರುಕ್ಷಣಕ್ಕೆ ಆ ದಾರ ಜಗಿಂಯಿತು....
ಸೂಜಿಯ ಕಣ್ಣುಗಳ ಮೂಲಕ ಅದು ಹಾದು ಬಂದು....
... ಅವೆಲ್ಲವನ್ನೂ ಒಂದೇ ಸಲಕ್ಕೆ ಎಳೆದುಬಿಟ್ಟಿತು.
ಗೆಳೆಯ ! ನೀನು ನನ್ನ ಪ್ರಾಣವನ್ನು ಉಳಿಸಿದೆ.


ದೊರೆ ಆ ಗಾಯಕನನ್ನು ತಬ್ಬಿಕೊಂಡ. ಆತ ಅದೇ ಕುರುಬನೇ !
ನೀನು ತಿರುಗಿ ಸಿಕ್ಕಿದ್ದು ನನಗೆಷ್ಟು ಸಂತೋಷ !
ನಿನಗೆ ನನ್ನ ನೆನಪಿದೆಯೋ ?
ನಿನ್ನನ್ನು ಮರೆತ ತಪ್ಪಿಗೆ ನನಗೆ ಕ್ಷಮೆಯೇ ಇಲ್ಲ.
ಹೇಳು, ನನ್ನ ತಪ್ಪಿಗೆ ನನ್ನನ್ನು ದಂಡಿಸಿದವನು ನೀನೇ ಏನು ?
ಖಂಡಿತ ಅಲ್ಲ. ನಿನ್ನ ಮಿತ್ರನಾದ ನಾನು ಅಂಥ ಕೆಲಸ ಮಾಡುವೆನೇ ?
ನಿನ್ನನ್ನು ದಂಡಿಸಿದ್ದು ನಿನ್ನ ಆತ್ಮಸಾಕ್ಷಿ. ಆಗ ವಿಧಿ ನಿಜವಾದ ಸೂಜಿಗಳ ರೂಪ ತಾಳಿ ನಿನ್ನನ್ನು ಬಾಧಿಸಿತು.
ವಿಧಿ ನನಗೆ ತಕ್ಕ ದಂಡನೆ ವಿಧಿಸಿತು. ಅದೇ ನಿನ್ನನ್ನು ನನ್ನ ಬಳಿ ಕರೆದು ತಂದು ನನ್ನನ್ನು ರಕ್ಷಿಸಿ, ಸಂತಸ ನೀಡಿತು.


ಇತ್ತ ಆಸ್ಥಾನಿಕರಿಗೆ ದೊರೆಯ ಕೊಠಡಿಗೆ ಬೀಗ ಜಡಿದುದನ್ನು ಕಂಡು ವಿಸ್ಮಯವಾಯಿತು.
ಇದೇನು ವಿಚಿತ್ರ! ನಾವು ಬೀಗ ಒಡೆದು ಏನು ನಡೆದಿದೆಯೆಂದು ನೋಡುವ.
ಅವರು ಬೀಗ ಮುರಿದು ಒಳಹೊಕ್ಕರು.
ನೀವು ಇಲ್ಲೇಕೆ ಬಂದಿರಿ?
ಈ ಗದ್ದಲ ಕೇಳಿ ಆ ವಂಚಕಿಯೂ ಧಾವಿಸಿ ಬಂದಳು.
ಯಾರು ನೀನು? ನನ್ನ ರಾಣಿಯೆಲ್ಲಿ? ಬೇಗನೆ ಅವಳನ್ನು ಕರೆದು ತಾ.


ಆ ವಂಚಕಿ ನಡುನಡುಗುತ್ತ ಕನಕಮಾಲೆಯನ್ನು ಕರೆದು ತರಲು ಹೋದಳು. ಕುರುಬನೂ ದೊರೆಯೂ ಅವಳನ್ನು ಹಿಂಬಾಲಿಸಿದರು.
ಓ ರಾಣಿ, ನನ್ನನ್ನು ಕ್ಷಮಿಸಿ!
ಕನಕಮಾಲಾ!
ಪ್ರಭೂ!..
ಆ ದುಷ್ಟ ವಂಚಕಿಯನ್ನು ರಾಜ್ಯದಿಂದ ಗಡಿಪಾರು ಮಾಡಿದರು. ಆ ಅರಸನೂ ರಾಣಿಯೂ ಸುಖ ಸಂತೋಷದಿಂದಿದ್ದರು. ಆ ನಂಬಿಗೆಯ ಕುರುಬ ಅವರ ಸೇವೆಯನ್ನು ಮಾಡಿಕೊಂಡಿದ್ದ.

SCIENCE
ANIMAL LIFE
HUMOUR
MYTHS
PUZZLES



**KALIA THE CROW**



You get it all in

# TINKLE

—The all-comics children's fortnightly

COPY RI... URE
...TRAL LIBRARY, BANGA...

Distributed by India Book House